**ಪತ್ರಿಕಾ ಪ್ರಕಟಣೆ**

ವಿಜಯಪುರ
ದಿನಾಂಕ: 14.07.2021

# ಅಕ್ರಮವಾಗಿ ಗಾಂಜಾ ಬೆಳೆದ ಆರೋಪಿತನ ಬಂಧನ.

* * * *

ದಿನಾಂಕ: 14.07.2021 ರಂದು 11:00 ಗಂಟೆಗೆ ತಿಕೋಟಾ ಪೊಲೀಸ್ ಠಾಣಾ ವ್ಯಾಪ್ತಿಯ ಜಾಲಗೇರಿ ವಿಠ್ಠಲವಾಡಿ ಕಾಶಿನಾಥ ತಂದೆ ಅರ್ಜುನ ರಾಠೋಡ ಇವನು ತನ್ನ ಜಮೀನದಲ್ಲಿ ಅಕ್ರಮವಾಗಿ ಗಾಂಜಾ ಮಾದಕ ವಸ್ತುವಿನ ಗಿಡಗಳನ್ನು ಬಿತ್ತಿ ಬೆಳೆದಿರುತ್ತಾನೆ ಅಂತಾ ಮಾಹಿತಿ ಬಂದಿದ್ದು, ದಾಳಿ ಮಾಡುವ ಕುರಿತು ಮಾನ್ಯ ಶ್ರೀ. ಅನುಪಮ್ ಅಗ್ರವಾಲ್, ಪೊಲೀಸ ಅಧೀಕ್ಷಕರು ವಿಜಯಪುರ ರವರು ಮತ್ತು ಡಾ॥ ರಾಮ್,ಎಲ್ ಅರಸಿದ್ದಿ, ಹೆಚ್ಚುವರಿ ಪೊಲೀಸ ಅಧೀಕ್ಷಕರು ವಿಜಯಪುರ, ರವರ ಮಾರ್ಗದರ್ಶನದಲ್ಲಿ ಶ್ರೀ. ಕೆ.ಸಿ.ಲಕ್ಷ್ಮೀನಾರಾಯಣ ಡಿ.ಎಸ್.ಪಿ ವಿಜಯಪುರ ಇವರ ನೇತೃತ್ವದಲ್ಲಿ, ಶ್ರೀ ಎಸ್.ಬಿ.ಪಾಲಭಾವಿ ಸಿಪಿಐ ವಿಜಯಪುರ ಗ್ರಾಮೀಣ ವೃತ್ತ, ಕುಮಾರಿ ಅನೀತಾ ಎಸ್ ರಾಠೋಡ ಮಪಿ.ಎಸ್.ಐ, ಶ್ರೀಮತಿ ಎಸ್‌ಕೆ ಲಂಗೋಟಿ ಮಪಿಎಸ್, ತಿಕೋಟಾ ಪಿ.ಎಸ್. ಹಾಗು ಸಿಬ್ಬಂಧಿ ಜನರಾದ. ಎಮ್‌ಎಸ್ ಕಟ್ಟಿಮನಿ, ಆರ್,ಎಮ್,ಖಾನಾಪುರ ಎಮ್.ಬಿ ಜನಗೊಂಡ, ಎಲ್.ಎಸ್. ಹಿರೇಗೌಡ, ಆರ್.ಡಿ ಅಂಜುಟಗಿ, ಎಸ್ ಎನ್ ಹಿರೇಗೋಳ, ಸಲಿಂ ಸವದಿ, ಎಸ್.ಬಿ ಶಿವೂರ, ಬಿ.ಎಲ್ ವಾಡೆದ, ರಮೇಶ ಬಜಂತ್ರಿ ಹಾಗೂ ಸರಕಾರಿ ಪಂಚರು ಕೂಡಿ ಬಾತ್ಮಿ ಬಂದ ಸ್ಥಳ ಜಾಲಗೇರಿ ಆತನ ಜಮೀನಕ್ಕೆ ಹೋಗಿ ದಾಳಿ ಮಾಡಿದಾಗ,

**ಆರೋಪಿತನಾದ**

- ಕಾಶೀನಾಥ ತಂದೆ ಅರ್ಜುನ ರಾಠೋಡ ವಯಾ 40 ವರ್ಷ ಉದ್ಯೋಗ: ಒಕ್ಕಲುತನ ಜಾತಿ ಹಿಂದು ಲಂಬಾಣಿ ಸಾ॥ ಜಾಲಗೇರಿ ವಿಠ್ಠಲವಾಡಿ ಇತನಿಗೆ ವಶಕ್ಕೆ ಪಡೆದುಕೊಂಡು,
- ಅವನ ಜಮೀನದಲ್ಲಿ ಇದ್ದ 24 ಹಸಿ ಗಾಂಜಾ ಗಿಡಗಳು, ಅವುಗಳ ಒಟ್ಟು ತೂಕ 58 ಕೆಜಿ ಇದ್ದು, ಒಟ್ಟು ಅ॥ಕಿ॥ 4 ಲಕ್ಷ ರೂಪಾಯಿ ಕಿಮ್ಮತ್ತಿನ ಗಾಂಜಾ ಗಿಡಗಳನ್ನು ವಶಕ್ಕೆ ಪಡೆದುಕೊಂಡಿದ್ದು ಇರುತ್ತದೆ.

ಇದನ್ನು ಕುಮಾರಿ ಅನೀತಾ.ಎಸ್.ರಾಠೋಡ ಮಪಿ.ಎಸ್.ಐ ತಿಕೋಟಾ ಪೊಲೀಸ್ ರವರು ವರದಿ ಕೊಟ್ಟ ಮೇರೆಗೆ ತಿಕೋಟಾ ಪೊಲೀಸ್ ಠಾಣಾ ಗುನ್ನಾ ನಂ 110/2021 ಕಲಂ 20(ಎ) ಎನ್.ಡಿ.ಪಿ.ಎಸ್. ಆ್ಯಕ್ಟ್ ಅಡಿಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಕೈಕೊಂಡಿದ್ದು ಇರುತ್ತದೆ. ಆರೋಪಿತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಈ ಪ್ರಕರಣ ಪತ್ತೆ ಮಾಡುವಲ್ಲಿ ಯಶಶ್ವಿಯಾದ ತಂಡದ ಕಾರ್ಯಾಚರಣೆಯನ್ನು ಪೊಲೀಸ್ ಅಧೀಕ್ಷಕರು ವಿಜಯಪುರ ರವರು ಶ್ಲಾಘಿಸಿರುತ್ತಾರೆ.

ಪೊಲೀಸ್ ಅಧೀಕ್ಷಕರು,
ವಿಜಯಪುರ ಜಿಲ್ಲೆ.

ಗೆ,
ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು ವಿಜಯಪುರ.
ಹಾಗೂ ವಿಜಯಪುರ. ಜಿಲ್ಲೆಯ ಎಲ್ಲ ಪತ್ರಕರ್ತಕರು ಹಾಗೂ ಛಾಯಾಗ್ರಾಹಕರು